Shikshan Sanshodhan : Journal of Arts, Humanities and Social Sciences ISSN: 2581-6241 Volume - 3, Issue - 2, Mar-Apr – 2020
Bi-Monthly, Peer-Reviewed, Refereed, Indexed Journal Impact Factor: 3.589
Received on : 05/03/2019 Accepted on : 17/03/2020 Publication Date: 31/03/2020

# ಜನಪದ ಸಂಗೀತ: ಜೀವನಾನುಭವದ: ಕಟ್ಟು

ಪ್ರೊ. ಬಿ.ಆರ್. ರಾಜು,
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ ಗೋಖಲೆ ಸೆಂಟೆನರಿ ಕಾಲೇಜು,
ಅಂಕೋಲಾ, ಉತ್ತರ ಕನ್ನಡ

ಶ್ರುತಿಸ್ಮೃತ್ಯಾದಿ ಸಾಹಿತ್ಯಂ ನಾನಾಶಾಸ್ತ್ರ ವಿದೋಪಿಚ।

ಸಂಗೀತಂ ಯೇ ನಜಾನಂತಿ ದ್ವಿಪದಾಸ್ತೇ ಮೃಗಾಃಸ್ಮೃತಾ

ಸುಭಾಷಿತ

ಶ್ರುತಿ, ಸ್ಮೃತಿ, ಸಾಹಿತ್ಯಮು ಶಾಸ್ತ್ರಗಳಲ್ಲಿ ಎಷ್ಟೇ ನಿಪುಣನಾಗಿದ್ದರೂ, ಅವನಿಗೆ ಸಂಗೀತ ತಿಳಿಯದಿದ್ದಲ್ಲಿ ಅವನು ಮೃಗಕ್ಕೆ ಸಮಾನ.

ಇಂದು ನಾವು ಜನಪದ ಸಂಗೀತದ ಬಗ್ಗೆ ಮಾತನಾಡುವುದಾದರೆ, ಇದು ನಾಡಿನ ಸಂಸ್ಕೃತಿ ಜೀವನದ ಅಮೂಲ್ಯ ಸ್ವತ್ತಾಗಿದೆ ಅಲ್ಲದೆ ಜನಪದ ಸಂಗೀತವು ಜನಸಮಾನ್ಯರ ಸ್ವತ್ತಾಗಿತ್ತು. ಅದು ಆತನ ನಿತ್ಯ ಜೀವನದ ವಿವಿಧ ರಂಗಗಳಲ್ಲಿ ಹರಡಿದ ಅನುಭವದ ಅಣಿಮುತ್ತುಗಳಾಗಿವೆ. ನಾಗರಿಕತೆಯ ನಾಜೂಕಗಳಿಲ್ಲದ ಹಳ್ಳಿಯ ಅಶಿಕ್ಷಿತ, ಮುಗ್ಧ ಮಗುವಿನ ನಿಷ್ಕಳಂಕ ನಗುವಿನಂತೆ, ಜನಪದ ಸಂಗೀತವು ಜನಸಾಮಾನ್ಯರ ನಿತ್ಯ ಜೀವನದ ಒಂದು ಘಟಕವಾಗಿಯೇ ಉಳಿದು ಕೊಂಡು ಬಂದಿದೆ. ಒಂದು ನಾಡಿನ ಬಗ್ಗೆ ನೋಡಿದಾಗ ಕಲೆಯು ಆ ನಾಡಿನ ನೈಜ ಸಂಸ್ಕೃತಿಯ ಪ್ರತಿಬಿಂಬವಾಗಿರತ್ತದೆ. ಅದು ತನ್ನ ನಾಡಿನ ಘನತೆ, ಗೌರವಗಳನ್ನು ಹೆಚ್ಚಿಸುವುದಕ್ಕಾಗಿ ಸದಾಕಾಲ ಶ್ರಮಿಸುತ್ತಿರುತ್ತದೆ ಜನಪದ ಸಂಗೀತವು ನಿತ್ಯ ಜೀವನದಲ್ಲಿ ಮಾನವನ ವಿವಿಧ ಭಾವನೆಗಳನ್ನು ಅತ್ಯಂತ ಸರಳವಾಗಿ ಬಹು ಪರಿಣಾಮಕಾರಿಯಾಗಿಯೂ ಅಭಿವ್ಯಕ್ತಿ ಪಡಿಸುತ್ತದೆ.

ಹೆಚ್ಚಾಗಿ ಭಾವನೆಗಳಿಂದ ಪ್ರೇರಿತವಾಗಿ ತಾನೇ ತಾನಾಗಿ ಅದು ಹರಿದು ಬರುತ್ತದೆ. ನಾಡಿನ ಬೇರೆ ಬೇರೆ ಭಾಗಗಳಲ್ಲಿಯ ಈ ಸಂಗೀತ ತನ್ನ ಧಾಟಿಯಲ್ಲಿ ಬಿನ್ನತೆ ಹಿಂದಿರುವ ಜನಮನದ ಭಾವನೆಯ ಆಳದ ಅರಿವು ಒಂದೇಯಾಗಿದೆ. ಅದು ಪ್ರತಿಯೊಬ್ಬ ಮಾನವನನ್ನು ಆಕರ್ಷಿಸುತ್ತದೆಯಲ್ಲದೆ. ಆತನಲ್ಲಿ ತನ್ನದೆ ಯಾದ ರೀತಿಯಲ್ಲಿ ಮೆರೆಯುತ್ತದೆ

ಜನಪದ ಸಂಗೀತವು ಜನಸಾಮಾನ್ಯರ ಜೀವನದಲ್ಲಿ ಯಾವಾಗಲೂ ಶಾಶ್ವತವಾಗಿ ಉಳಿದುಕೊಂಡು ಬಂದಿವೆ. ಒಂದು ದೃಷ್ಟಿಯಿಂದ ನೋಡಿದರೆ ಮಾನವನ ಜೀವನವು ಪ್ರಾರಂಭಗೊಳ್ಳುವುದು ಹಾಡಿನಿಂದಲೇ ಎಂಬ ಮಾತನ್ನು ತಳ್ಳಿಹಾಕುವಂತಿಲ್ಲ. ಏಕೆಂದರೆ ಹಿಂದೆ ಆದಿಮಾನವನು ತನ್ನ ದುಗುಡು ದುಮ್ಮಾನಗಳನ್ನು ಕಷ್ಟಕಾರ್ಪಣ್ಯಗಳನ್ನು ಹಾಡುವುದರ ಮೂಲಕ ಅವುಗಳನ್ನು ಮರೆಯುತ್ತಿದ್ದ. ಅಲ್ಲದೆ ಹಬ್ಬ ಹರಿದಿನಗಳಲ್ಲಿ, ಧಾರ್ಮಿಕ ವಿಧಿ ಕಾರ್ಯಗಳಲಿ ್ಲ ಆನಂದದಿಂದ ಹಾಡಿ, ಹಾರಾಡಿ ಕುಣಿದಾಡುತ್ತಿದ್ದ. ತನ್ನ ಜೀವನದ ಪ್ರತಿಯೊಂದು ಅನುಭವವನ್ನು ಆತನು ತನ್ನದೇ ಆದ ದಾಟಿಯಲ್ಲಿ ಸೆರೆ ಹಿಡಿದಿಟ್ಟ. ಹುಟ್ಟಿನಿಂದ ಮರಣ ಪರಿಯಂತಹ ಪ್ರತಿಯೊಂದು ನಿಮಿಷದ ಅನುಬವಗಳಿಂದ ಪ್ರಚೋದನೆ ಪಡೆದು ತೀವ್ರತಮ ಭಾವನೆಗಳಿಂದ ಪ್ರೇರಿತನಾಗಿ ಹಾಡಲು ತೊಡಗಿದ. ಊಳುವಾಗ, ಬಿತ್ತುವಾಗ, ಹಾಳು ಹರಟೆ ಹೊಡೆದರೆ ಭತ್ತ ಕಟ್ಟುವಾಗ ದಾರಿಯ ದಣಿವನ್ನು ಮರೆಯಲು, ಭಯವನ್ನು ಹೋಗಲಾಡಿಸಲು, ಹೆಣ್ಣು ಗಂಡನ ಮನೆಗೆ ಹೋಗುವಾಗ, ತವರಿನ ಮನೆಗೆ ಬರುವಾಗ, ಹುಟ್ಟಿದಾಗ ಸತ್ತಾಗ ಒಂದೇ ಎರಡೇ ಜನಪದ ಸಂಗೀತವು ಜೀವನದ ಸಮಗ್ರ ಘಟನೆಗಳನ್ನು ತನ್ನ ಲಯದ ದಾಟಿಯಲ್ಲಿ ತುಂಬಿಕೊಂಡವು. ಹೀಗೆ ಜೀವನದ ಬೇರೆ ಬೇರೆ ಅನುಭವಗಳನ್ನು ಆಧರಿಸಿ ಬೇರೆ ಬೇರೆ ಜನಪದ ಹಾಡುಗಳು ಬೆಳಕಿಗೆ ಬಂದಿವೆ. ಉದಾಹರಣೆಗೆ–ಲಾಲಿಯ ಪದಗಳು, ಸೋಬಾನ ಪದಗಳು, ಹಬ್ಬದ ಹಾಡಗಳು, ಕೂಲಿ ಹಾಡುಗಳು, ಹೋಳಿ ಪದಗಳು, ಸುಗ್ಗಿಯ ಹಾಡುಗಳು, ಗೀಗಿ ಪದಗಳು, ಲಾವಣಿ ಪದಗಳು, ಕರಬಲ್ ಪದಗಳು, ಸಂವಾದ ಪದಗಳು, ವಿಶೇಷವಾಗಿ ನಾಡಿನ ಯುವಜನಾಂಗದ ಪ್ರೀತಿ ಪ್ರೇಮ ಸರಸ–ಸಲ್ಲಾಪ, ಹಾಸ್ಯ ಮುಂತಾದ ಸನ್ನಿವೇಶಗಳನ್ನು ಒಳಗೊಂಡಿರುತ್ತವೆ.

**Shikshan Sanshodhan : Journal of Arts, Humanities and Social Sciences** ISSN: 2581-6241 Volume - 3, Issue - 2, Mar-Apr – 2020
Bi-Monthly, Peer-Reviewed, Refereed, Indexed Journal Impact Factor: 3.589
Received on : 05/03/2019 Accepted on : 17/03/2020 Publication Date: 31/03/2020

ಜನಪದ ಸಂಗೀತವು ಗ್ರಂಥಸ್ಥವಾಗಿ ಬೆಳೆದುಬಂದುದಲ್ಲ, ಅದು ಬಾಯಿಂದ ಬಾಯಿಗೆ, ಕಂಠದಿಂದ ಕಂಠಕ್ಕೆ ಹರಿದು ಬಾಳಿ ಬೆಳೆದು ಬಂದ ಸಂಗೀತವಾಗಿದೆ. ಆದ್ದರಿಂದಲೇ ಇದಕ್ಕೆ ಯಾವ ಶಾಸ್ತ್ರದ ಕಟ್ಟುನಿಟ್ಟುಗಳಿಲ್ಲ. ಅದು ಸರ್ವ ತಂತ್ರ ಸ್ವತಂತ್ರ ಸಂಗೀತ ಭಾವನೆಗಳು ಹರಿದು ಬಂದ ಅನುಬಘದ ನೋಡಿಗಳೇ ಜನಪದ ಸಂಗೀತವಾಗಿದೆ ಇತ್ತೀಚಿಗೆ ಈ ಅಮೂಲ್ಯ ನಿಧಿಯನ್ನು ಗ್ರಂಥಸ್ಥವನ್ನಾಗಿಸು ಕೆಲವು ಅಲ್ಲಲ್ಲಿ ಪ್ರಯತ್ನಗಳು ನಡೆದಿದ್ದ, ಈ ದಿಸೆಯಲ್ಲಿ ಇಂದು ಗಣನೀಯವಾದ ಕಾರ್ಯವಾಗಬೇಕು. ಶಾಸ್ತ್ರೀಯ ಸಂಗೀತದ ಮಟ್ಟದ ದೃಷ್ಟಿಯಿಂದ ಇಂದು ನಾವು ಈ ಸಂಗೀತವನ್ನು ತಾತ್ಸಾರ ಮಾಡಿದುದರ ಪರಿಣಾಮವಾಗಿ ಸಾಕಷ್ಟು ಜನಪದ ಸಂಗೀತವನ್ನು ಕಳದುಕೊಂಡಿದ್ದೇವೆ. ಇಂದಿನ ಕಲಿತ ಜನಾಂಗ ಇನ್ನುಳಿದುದ್ದನ್ನು ಉಳಿಸಿ ಬೆಳೆಸಿಕೊಳ್ಳುವ ಜವಾಬ್ದಾರಿಯ ಕಾರ್ಯವನ್ನು ಮಾಡಬೇಕಿದೆ. ಜನಪದ ಸಂಗೀತವನ್ನು ಕೇಳಿದಾಗ ಅಲ್ಲಿ ಯಾವುದೇ ವಾದ್ಯಗಳು ಇಲ್ಲವಾದರೂ ಸಹ ಕೇಳಲು ಬಲು ಇಂಪು ಕೇಳುಗರಲ್ಲಿ ಒಂದು ರೀತಿಯಾದ ಆನಂದವನ್ನು ಇವು ನೀಡುತ್ತವೆ. ಉದಾಹರಣೆಯಾಗಿ ನೋಡುವುದಾದರೆ, ಇಲ್ಲಿ ತಾಯಿ ಮಗಳ ಸಂಬಂಧ ಎಷ್ಟೊಂದು ಪರಿಣಾಮಕಾರಿಯಾಗಿದೆ ಎಂದರೆ ಮದುವೆಯಾದ ಮಗಳಿಗೆ ಬುದ್ಧಿವಾದ ಹೇಳಿ ತಾಯಿಯು ಮಗಳನ್ನು ಗಂಡನ ಮನೆಗೆ ಕಳುಹಿಸಿಕೊಡುತ್ತಾಳೆ.

ಹೆಣ್ಣುಮಗಳನ್ನು ಕಳುಹಿಸಿ :

ಕಣ್ಣಿಗೆ ನೀರ ತಂದು ನಿಂತಾಳ ಊರ ದಾರಿಯ ಮೇಲೆ

ನಿಂತಾಳೆಊರ ಬಾರೆಮೇಲೆ ಹಡೆದವ್ವ

ಹನ್ನೆರಡು ಗುಡ್ಡ ಮರೆಯಾದವು

ಗಂಡನ ಮನೆಗೆ ಮಗಳನ್ನು ಕಳುಹಿಸಲೇಬೇಕಾಗಿದೆ. ಆದರೆ ಸಂಬಂಧ ಬಿಡುವ ಹಾಗಿಲ್ಲ. ಮಗಳನ್ನೇ ನೋಡುತ್ತ ನಿಂತಿದ್ದಾಳೆ. ಗಂಡನ ಮನೆಗೆ ಹೋಗುತ್ತಲಿರುವವಳನ್ನು ನೋಡುತ್ತ ಹನ್ನೆರಡು ಗುಡ್ಡ ಮರೆಯಾಗುತ್ತದೆ ಈ ಹಾಡನ್ನು ಕೇಳುವಾಗ ತಾಯಿ–ಮಗಳ ಸಂಬಂಧ ಹೇಗಿದೆ. ಮಾತೃಪ್ರೇಮ ಎಂಬುದು ಒಂದು ಕ್ಷಣ ಕಣ್ಣ ಮುಂದೆ ಬಂದು ನಿಲ್ಲುತ್ತದೆ. ಇದೆ ಜನಪದ ಸಂಗೀತಕ್ಕೆ ಇರುವ ಒಂದು ವಿಶೇಷವಾದ ಶಕ್ತಿ ಎಂದೆ ಹೇಳಬಹುದು.

ಜನಪದ ಕಾವ್ಯ ಹುಟ್ಟಿದ್ದು ಸಾವಯವ ಸಮಾಜದಲ್ಲಿ ಸಮಷ್ಟಿ ಪ್ರಜ್ಞೆ ಇನ್ನೂ ಜಾಗೃತವಾಗಿದ್ದ ಸಂದರ್ಭದಲ್ಲಿ ಮತ್ತು ಈ ಸಮಾಜ ಅಂತಃಕರಣ ಆತ್ಮೀಯತೆ ಮುಂತಾದ ಮೌಲ್ಯಗಳ ಮೇಲೆ ನಿಂತಿರುವುದು.

ಇಡಿಯ ಹಳ್ಳಿಯೇ ಪರಸ್ಪರ ತಿಳುವಳಿಕೆಯಲ್ಲಿ ಒಂದು ಕುಟುಂಬವಾಗಿ ಬಾಳುತ್ತದೆ. ಆರ್ಥಿಕ, ಸಾಮಾಜಿಕ, ಧಾರ್ಮಿಕ ಸಂಬಂಧಗಳನ್ನು ಮೀರಿದ ಒಂದು ಬಂಧನ ಈ ಸಮಾಜವನ್ನು ನಿಯಂತ್ರಿಸುತ್ತದೆ. ಇಡಿಯ ಹಳ್ಳಿಯಿಂದ ಅದರ ಘಟಕಗಳಾದ ಜಾತಿ, ಕುಟುಂಬ, ವ್ಯಕ್ತಿಗಳವರೆಗೂ ಈ ಸಂಬಂಧ ಇಳಿದು ಬರುತ್ತೆ ಈ ಸಂದರ್ಭಕ್ಕೆ ಅನುಗುಣವಾಗಿ ಒಂದು ಹಾಡಿನ ನುಡಿಯನ್ನು ನೋಡುವುದಾದರೆ;

ಸಾವಿರದ ಎತಗೋಳು ಬ್ಯಾರ್‍ಯಾಕ ಮೆಯ್ದಾವ?

ಬ್ಯಾರ್‍ಯಾಗ್ಯಾರೇನೊ ಅಣತಮರ ಹೊಲದಾನ

ಜೋಡ ಕೂರಿಗಿ ಅಗಲ್ಯಾವ।

ಚೆನ್ನಾಗಿ ಬಾಳಿದ ಅವಿಭಕ್ತ ಕುಟುಂಬವೊಂದು ಒಡೆದು ಬೇರಾದ ಪ್ರಸಂಗವೊಂದು ಇಲ್ಲಿ ಮೂರನೆಯ ವ್ಯಕ್ತಿಯೊಬ್ಬನಿಂದ ನಿರೂಪಿಸಿಲ್ಪಟ್ಟಿದೆ. ಸಾವಿರದ ಎತಗೋಳು ನಿಜವಾದ ಸಂಖ್ಯೆಯಲ್ಲಾದರೂ ಮನೆತನದ ಶ್ರೀಮಂತಿಕೆಯನ್ನು ತೋರಿಸುತ್ತದೆ. ಆ ಮನೆತನದ ಎತ್ತುಗಳ ಎಲ್ಲ ಕೂಡಿ ಮೇಯುವದು, ಜೋಡು ಕುರಿಗೆಗಳು ಕೂಡಿಯೇ ಕೆಲಸ ಮಾಡುವದು ಪರಿಪಾಠ ಹಾಗಿದ್ದರೆ ಚೆಂದ. ಆದರೆ ಇಂದು ಎತ್ತುಗಳು ಬೇರೆಬೇರೆಯಾಗಿ ಮೆಯ್ಯುತ್ತಿವೆ. ಜೋಡು ಕುರಿಗೆಗಳು ಅಗಲಿ ಏನೋ ಅಸಹಜವಾದದ್ದು. ಅಗಲಬಾರದು ಆಗಿಹೋಗಿದೆ. ಮೊದಲ ಸಾಲಿನ ಸ್ವಗತ ಪ್ರಶ್ನೆಯಲ್ಲೇ ಸಂದೇಹದಸುಳಿವಿದೆ. ಎತ್ತುಗಳು ಬೇರಾಗಿ ಮೇಯುತ್ತಿರಬೇಕಾದರೆ ಅಣ್ಣ–ತಮ್ಮಂದಿರೂ ಬೇರೆಬೇರೆಯಾಗಿದ್ದರೂ ಏನೋ! ಮೊದಲ ಸಾಲಿನ ಸಂದೇಶಕ್ಕೆ ಇದು ಸಮಾಧಾನ ಆದರೆ ಇಲ್ಲೂ ಸಂದೇಹದ ಸುಳಿವು ಇನ್ನೂ ಹೋಗಿಲ್ಲ. ಜೊತೆಗೆ ಹೀಗಾಗ ಬಹುದಿತ್ತು ಎಂಬ ಧ್ವನಿಯೂ ಇದೆ. ಕೊನೆಯ ಸಾಲಿನಲ್ಲಿ ಮೊದಲ ಸಾಲಿನ ಸಂದೇಹಕ್ಕೆ.

ಎರಡನೆಯ ಸಾಲಿನ ತರ್ಕಕ್ಕೆ ಇನ್ನೊಂದು ಪುರಾವೆ ಇದೆ. ಅಣ್ಣ-ತಮ್ಮಂದಿರು ಬೇರೆಯಾದದ್ದರ ಪರಿಣಾಮವಾಗಿ ಸಾವಿರದ ಎತ್ತುಗಳು ಬೇರೆಯಾಗಿ ಮೇಯುತ್ತಿವೆ, ಜೋಡು ಕುರಿಗಳು ಅಗಲಿವೆ. ಆದರೆ ಕವಿ ಪರಿಣಾಮಗಳ ಮೂಲಕ ಕಾರಣವನ್ನು ಉಹಿಳಿಸುತ್ತಾನೆ. ಹೀಗೆ ಜನಪದ ಹಾಡುಗಳನ್ನು ಕೇಳುತ್ತಿದ್ದರೆ ಕೇಳುಗನಿಗೆ ಇವು ನೀತಿಪಾಠ, ಸಮಾಜದಲ್ಲಿ ಬದುಕನ್ನು ಕಟ್ಟಿಕೊಳ್ಳುವ ರೀತಿ, ನ್ಯಾಯ, ಸಂಬಂಧಗಳು ಇತ್ಯಾದಿ ಎಲ್ಲ ವಿಷಯಗಳು ಜನಪದ ಸಂಗೀತದಲ್ಲಿ ಅಡಗಿವೆ.

## ಸಂಗೀತದ ಮಹತ್ವ:

ನಮ್ಮ ದೇಶವನ್ನು ಸಂಗೀತದ ನಾಡೆಂದು ಕರೆಯುವುದುಂಟು ಏಕೆಂದರೆ ಸಂಗೀತವು ನಮ್ಮ ರಾಷ್ಟ್ರಜೀವನದ ಮುಖ್ಯಭಾಗವಾಗಿರುವುದು. ಈ ಪವಿತ್ರವಾದ ಸಂಗೀತಕಲೆಯು ಸರ್ವ ದೇಶ, ಸರ್ವ ಕಾಲಗಳಲ್ಲೂ ಎಲ್ಲೆಡೆ ತನ್ನ ಅನುಭವ, ಸ್ವರೂಪ ವೈವಿಧ್ಯದಿಂದ ವಿಶ್ವದ ವಿವಿಧ ಸ್ಥಿತಿಗಳಲ್ಲಿ ಭಾಗಿಯಾಗಿ ನಿತ್ಯಜೀವನದೊಂದಿಗೆ ಸೇರಿ, ಬದಲಾವಣೆಯನ್ನು ಕಾಣುತ ತನ್ನ ಪರಿಪೂರ್ಣತೆಯಿಂದ ಜಗತ್ತಿನ ಸಂಗೀತ ಪದ್ಧತಿಗಳಿಗೆ ಮಾದರಿಯಾಗಿದೆ. ಅಲ್ಲದೆ ಅವುಗಳನ್ನು ಮೀರಿ ನಿಂತಿರುವುದು ನಮಗೆ ಭಾರತೀಯರಿಗೆ ಹೆಮ್ಮೆಯ ವಿಷಯವಾಗಿದೆ.

- ಕಲೋಪಾಸಕನನ್ನು ನಾದಾನುಸಂಧಾನದಿಂದ ಬಾಹ್ಯವನ್ನು ಮರೆಸಿ, ಭಾವನಾ ಪ್ರಪಂಚಕ್ಕೆ ಒಯ್ದು, ಆತ್ಮ ವಿಕಾಸಕ್ಕೂ ಮತ್ತು ಪರಿಪೂರ್ಣತೆಯ ಸೌಂದರ್ಯದ ಅನಭವಕ್ಕೂ, ಕಾರಣೀಭೂತವಾದ ಏಕೈಕ ಸಾಧನವಾಗಿದೆ ಈ ಸಂಗೀತ ಕಲೆ. ಆದ್ದರಿಂದ ಸಂಗೀತವನ್ನು ಅನುಭವವೇದ್ಯ ಕಲೆ ಎಂದೇ ಕರೆಯಬಹುದು.
- ಮಾನವನ ಹೃದಯದಗಂಟು ಗೋಜುಗಳನ್ನು ಸಡಿಲಮಾಡಿ ಮೃದುಗೊಳಿಸಿ ಮಾನವೀಯ ಮೌಲ್ಯಗಳಿಗೆ ಸ್ಪಂದಿಸುವಂತೆ ಮಾಡಿ ಅವನನ್ನು ಮಾನವೀಯತೆಗೆ ಒಯ್ದು ಸುಸಂಸ್ಕೃತನನ್ನಾಗಿ ಮಾಡುವ ಏಕೈಕ ಪ್ರಮುಖ ಸಾಧನವಾಗಿದೆ ಸಂಗೀತ ಕಲೆ.
- ಮನುಷ್ಯನು ಸುಸಂಸ್ಕೃತನೆಂದರೆ ಅವನಲ್ಲಿ ಕಲೆಯ ಅರಿವು ಆದ್ದರಿಂದ ಕಲೆಗಳಿಲ್ಲದ ಬದುಕು ಬೆಳೆಯಲಾರದು ಮತ್ತು ಹದ ವಾಗಲಾರದು. ಹೀಗೆ ಒಂದು ಕಡೆ ಸಂಗೀತವು ಕಲೆಯಾಗಿದ್ದರೆ, ಮತ್ತೊಂದು ಕಡೆ, ಅದು ಮನುಷ್ಯರಿಗೆ ನಿಜವಾದ ಸಾಮಾಜಿಕ ಮತ್ತು ಆಧ್ಯಾತ್ಮಿಕ ಪ್ರಜ್ಞೆಯನ್ನು ಉಂಟುಮಾಡುವುದರಲ್ಲಿ ಯಶಸ್ವಿಯಾಗಿ ವಿದ್ಯೆ ಎನಿಸಿಕೊಂಡಿದೆ.
- ಮನುಷ್ಯನನ್ನು ಸುಸಂಸ್ಕೃತನಾಗಿ ಮಾಡುವ ಅದ್ವಿತೀಯ ಸಾದನವಾಗಿದೆ ಆದ್ದರಿಂದ ಕಲೆಯೂ ಮತ್ತು ವಿದ್ಯೆಯೂ ಆಗಿರುವ ಈ ಸಂಗೀತವು ಸಮಾಜದಲ್ಲಿ ವಹಿಸುವ ಪಾತ್ರ ಅವರ್ಣನೀಯ. ಇದರ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯ ಮಹತ್ತರವಾದದ್ದು.

**ಒಂದು ಶಕ್ತಿಯಾಗಿ ಸಂಗೀತ.:**

ಜೀವನದಲ್ಲಿ ಆನಂದವನ್ನು ಗಳಿಸಿಕೊಳ್ಳುವುದೇ ಮಾನವ ಜೀವನದ ಲಕ್ಷಣವಾಗಿದೆ ಸೌಂದರ್ಯ ಯುತ ಸಾಧನಗಳಿಂದ ಆನಂದವು ಸಿದ್ಧಿಯಾಗುತ್ತದೆ. ಸೌಂದರ್ಯವು ಯಾವಾಗ ಸಿದ್ಧಿಗೊಂಡು, ಪಕ್ವತೆಗೊಳ್ಳುತದೆಯೋ ಆಗ ಅದೇ ರಸವಾಗಿ ಪರಿವರ್ತನೆ ಹೊಂದುತ್ತದೆ. ತಾನು ಯಾವ ಮಟ್ಟದ ಕಲಾ ಕ್ಷೇತ್ರದಲ್ಲಿ ಕಲಾಕಾರ ತನ್ನ ಕಲೆಯಲ್ಲಿ ರಸವನ್ನು ಅನುಬಫಿಸುತ್ತಾನೆಯೋ ಅದೇ ಮಟ್ಟದ ರಸವನ್ನು ಬೇರೊಬ್ಬ ಕಲಾ ರಸಿಕನಿಗೆ ಕೊಡಲು ಬಯಸುತ್ತಾನೆ. ಈ ಪ್ರಕೃತಿಯಲ್ಲಿ ಅವನ ಕಲ್ಪನೆಗೆ ಹೊಸ ದಿಕ್ಕು ಹೊಸ ಸ್ಫೂರ್ತಿ ಸಿಗುತ್ತದೆ ಕಲೆಯ ಈ ಸೃಜನತೆಯಲ್ಲಿ ಅವನಿಗೆ ಈ ಸುಖ ಪ್ರಾಪ್ತಿಯಾಗುತ್ತದೆ. ರಸಿಕರು ಹಾಗೂ ವಿಮರ್ಶಕರಿಂದ ಅವನ ಕಲೆ ಪುಟವಿಟ್ಟ ಚಿನ್ನ ಆಗುತ್ತದೆ. ಇದರಿಂದ ಅವನ ಕಲೆಯಲ್ಲಿ ಅವನಿಗೆ ಪೂರ್ಣ ವಿಶ್ವಾಸ ಮತ್ತು ಇದರ ಫಲಸ್ವರೂಪವಾಗಿ ಅವನ ಹೃದಯದಲ್ಲಿ ಸ್ಥಾಯಿಯಾದ ಸುಖವು ಪ್ರಾಪ್ತಿಯಾಗುತ್ತದೆ. ಸಂಗೀತ ಕಲೆಯ ಮಾಧ್ಯಮ ಧ್ವನಿ ಮಾತ್ರವಾಗಿದೆ. ಬೇರೆಲ್ಲ ಕಲೆಗಳಿಗಿಂತ ಸಂಗೀತದಲ್ಲಿ ಲೋಕ ರಂಜನೆಯ ಕ್ಷಮತೆ ಅಧಿಕವಾಗಿರುವುದು. ಈ ವಿದ್ಯೆಗೆ ಕಲ್ಲನ್ನು ಕರಗಿಸುವ ಶಕ್ತಿಯಿಂದ ಮನುಷ್ಯನನ್ನು ನಗಿಸುವುದು, ಅಳಿಸುವುದು ಅಲ್ಲಿಯವರಿಗೆ ಬ್ರಹ್ಮಾಂತರ ಎಲ್ಲ ಭಾವನೆಗಳ ಪ್ರದರ್ಶನವು ಸಂಗೀತದಲ್ಲಿದೆ. ಕವಿ ರವೀಂದ್ರನಾಥ್ ಟ್ಯಾಗೋರ್ ಅವರು "ಕಾವ್ಯ ಎಲ್ಲಿ ತನ್ನ ಅಬಿವ್ಯಕ್ತಿಯಲ್ಲಿ ಅಸಮರ್ಥವಾಗುತ್ತದೆ ಯೋ ಅಲ್ಲಿಂದ ಸಂಗೀತದ ಪ್ರಥಮ ಮೆಟ್ಟಿಲು ಪ್ರಾರಂಭವಾಗುತ್ತದೆ" ಎಂದು ಹೇಳಿರುವ ಮಾತು ಇಲ್ಲಿ ನೆನಪಿಸಿಕೊಳ್ಳಬಹುದ.

## ಸಂಗೀತಗಾರನ ಸಂಗೀತದ ಆಯಾಮ:

ಸಂಗೀತದಲ್ಲಿ ಹಾಡುಗಾರನ ಭಾಷೆವೇ ಬೇರೆ ಬೇರೆಯಾಗುತ್ತದೆ. ಸಂಗೀತವು ಹರಿಯುವ ನೀರಿನಂತೆ. ಹೇಗೆ ನೀರನ್ನು ಮುಷ್ಟಿಯಲ್ಲಿ ಹಿಡಿಯಲಾಗದೆ ಅದರ ತೇವಾಂಶವನ್ನು ಅನುಬವಿಸಬಹುದೋ ಹಾಗೆಯೇ ಸಂಗೀತವನ್ನು ಅನುಭವಿಸಬೇಕು.

**Shikshan Sanshodhan : Journal of Arts, Humanities and Social Sciences** **ISSN: 2581-6241** **Volume - 3, Issue - 2, Mar-Apr – 2020**
**Bi-Monthly, Peer-Reviewed, Refereed, Indexed Journal** **Impact Factor: 3.589**
**Received on : 05/03/2019** **Accepted on : 17/03/2020** **Publication Date: 31/03/2020**

ಅದನ್ನು ಶಬ್ದಗಳಲ್ಲಿ ಹಿಡಿಯಲಾಗುವುದು. ಪ್ರತಿಯೊಂದು ಸ್ವರವನ್ನು ಅನುಭವಿಸಿ ಹಾಡಬೇಕಾಗುತ್ತದೆ. ಅಲ್ಲದೆ ಒಂದು ಸ್ವರವನ್ನು ಪದೆ ಪದೇ ಹಚ್ಚುವಾಗಲೂ ಬೇರೆ ಬೇರೆ ಭಾವದಲ್ಲಿ ಹಚ್ಚಬೇಕಾಗುತ್ತದೆ. ಸ್ವರದಲ್ಲಿ ಮುಳುಗಿದರೆ ಅದು ಎಣ್ಣೆಯಲ್ಲಿ ಅದ್ದಿದ ನೆನೆಯದಂತಿರಬೇಕು. ಒಂದು ಸ್ವರದಿಂದ ಇನ್ನೊಂದು ಸ್ವರಕ್ಕೆ ಹೋಗುವಾಗ ಅದರೊಳಗಣ ಸಂವಾದ ನೋಡುವುದು ಮುಖ್ಯವಾಗುತ್ತದೆ. ಮಾತನಾಡುವಾಗ ನಾವೇನು ಒಂದೇ ಸ್ತರದಲ್ಲಿ ಯಾವುದೇ ಏರಿಳಿತ ಗಳಲ್ಲದೇ ಮಾತನಾಡುತ್ತೇವೆಯೆ? ರಾಗ ವಿಕಾಸ ವಾಗಿದ್ದು, ಭಾವನೆ ವಿಕಾಸವಾಗಿದ್ದು ಕಾಣಿಸುವುದು ಬೇಡವೆ ಬಂದಿಶದ ಮುಖಡಾ ಪ್ರತಿಯೊಂದು ರಾಗದಲ್ಲೂ ಬೇರೆ ರೀತಿಯಲ್ಲಿ ಹಾಡುವ ಪ್ರಯತ್ನ ಮಾಡುವುದು ಬೇಡವೇ. ಪ್ರತಿಯೊಂದು ರಾಗದಲ್ಲೂ ಜನಪದ ಒಂದು ಟೋನ ಇದೆ. ಅದಕ್ಕೆ ಬೇರೆ ಬೇರೆ ಬಣ್ಣಗಳು ಕೊಟ್ಟು ರಾಗ ಮಾಡಿರುವುದು. ಒಂದು ರಾಗವನ್ನು ಅದು ಇದ್ದಂತೆ, ಸಾಂಪ್ರದಾಯಿಕವಾಗಿ ನಾವು ಕಲಿತಂತೆ ಇಡುವುದು ಪ್ರಾಮಾಣಿಕತೆಯೇ ಆದರೂ, ಅಂದಿನ ನಮ್ಮೊಡುಗೆ ತಕ್ಕಂತೆ ಇಟ್ಟರೆ ಪ್ರಾಮಾಣಿಕತೆಯ ಜೊತೆ ಉತ್ಸ್ಫೂರ್ತಿ ಇರುತ್ತದೆ ಹೀಗೆ ನಾವು ಜನಪದ ಸಂಗೀತದ ಬಗ್ಗೆ ನೋಡಿದಾಗ ಇದು ನಿರಂತರವಾಗಿ ಬೆಳೆದು ಬಂದ ಒಂದು ಸಂಪದ್ರಾಯವಾಗಿದೆ ಎಂದೆ ಹೇಳಬಹುದು. ಏಕೆಂದರೆ ಹಿಂದಿನಿಂದಲು ಬೆಳೆದು ಬಂದ ಈ ಸಂಗೀತ ಕಲೆ ಇಂದು ಹೆಮ್ಮರವಾಗಿ ಬೆಳೆಯುತ್ತದೆ.

**ಪರಾಮರ್ಶನ ಗ್ರಂಥಗಳು :**

1. ತಿರುವು ಲೈ ಸೋದರಿಯರು : ಕರ್ನಾಟಕ ಸಂಗೀತದರ್ಪಣ (ಭಾಗ–1), ಶ್ರೀನಿವಾಸ ಪ್ರಕಾಶನ, ರಾಜಾಜಿನಗರ, ಬೆಂಗಳೂರು ಮುದ್ರಣಾಲಯ–2016.
2. ಎಸ್.ಕೆ.ಕರೀಂಖಾನ್ : ಜಾನಪದ ಗೀತೆಗಳು, ದಿವ್ಯಚಂದ್ರ ಪ್ರಕಾಶನ, ಬೆಂಗಳೂರು, ಮುದ್ರಣ–2007.
3. ಡಾ. ಗಿರಡ್ಡಿ ಗೋವಿಂದರಾಜ: ಜನಪದ ಕಾವ್ಯ, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಮುದ್ರಣ–1994.
4. ಡಾ. ಶಾರದಾ ವಿ. ಬಟ್ಟ : ನಾದಪಯಾ ಶ್ರೀ ನಾರಾಯಣ ಪಂಡಿತರ ಅಭಿನವಭಾವ ಬಂದಿಶ, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಮುದ್ರಣ–2009.